**ದಿನಾಂಕಃ 02.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀಮತಿ ಡಿ ಕೆ ಆರ್ ವಕೀಲರಿಂದಃ**

6) ದಾವಾ ಬಿ–ಷಡ್ಯೂಲ್ ಸ್ವತ್ತು ನನಗೆ ಸೇರಿದ ಜಮೀನು. ಬಿ–ಷಡ್ಯೂಲ್ ನಲ್ಲಿ ಇರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಪಡೆದಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಪಡೆಯದೇ ಇರುವುದರಿಂದ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿದ್ಯುತ್ ಸಂಪರ್ಕ ಪಡೆಯದೇ ಇದ್ದರೂ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕೊಳವೆ ಬಾವಿಗೆ ಪ್ರತಿವಾದಿಗಳೇ ವಿದ್ಯುತ್ ಸಂಪರ್ಕ ಪಡೆದಿದ್ದು ಬಿಲ್ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಬಿ–ಷಡ್ಯೂಲ್ ಸ್ವತ್ತನ್ನು ಅಳತೆ ಮಾಡಿಸಲು ನನ್ನ ತಕರಾರು ಇರುವುದಿಲ್ಲ. ಬಿ–ಷಡ್ಯೂಲ್ ಸ್ವತ್ತು ಪ್ರತಿವಾದಿಗೆ ಸೇರಿದ್ದು ನನಗೆ ಸೇರಿದ ಯಾವುದೇ ಕೊಳವೆ ಬಾಕಿ ಬಿ–ಷಡ್ಯೂಲ್ ನಲ್ಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿ ಮುದ್ರಿಸಲಾಗಿದೆ .)

ಸಾ.ಓ.ಹೇ.ಕೇ.ಸ.ಇ.ಎಂ.ಒ.

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಚನ್ನರಾಯಪಟ್ಟಣ